ಅಧ್ಯಕ್ಷರು:- ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ. ಪ್ರಶ್ನೋತ್ತರ ಕಾಲದಲ್ಲಿ ಒಂದು ಗಂಟೆಯಲ್ಲಿ ೨೦ ಪ್ರಶ್ನೆಗಳಿಗೆ ಉತ್ತರ ಆಗಬೇಕು. ತಾವು ಉತ್ತರವನ್ನು ಪುನಃ ಓದಿ ಉಪಪ್ರಶ್ನೆಗಳನ್ನು ಕೇಳುವುದಕ್ಕಿಂತ ತಾವು ತಯಾರು ಮಾಡಿ ಇಟ್ಟುಕೊಂಡು ಪ್ರಶ್ನೆ ಕೇಳಿದರೆ ಸ್ವಲ್ಪದರಲ್ಲೇ ಎಲ್ಲರಿಗೂ ಸಮಾನ ಅವಕಾಶ ಸಿಗುತ್ತದೆ. ತಾವುಗಳು ಒಂದೇ ಪ್ರಶ್ನೆಗೆ ೧೦ ನಿಮಿಷ ತೆಗೆದುಕೊಂಡರೆ ಬೇರೆ ಯಾವ ಪ್ರಶ್ನೆಗಳಿಗೂ ಅನುಕೂಲವಾಗುವುದಿಲ್ಲ. ಅದಕ್ಕೆ ತಾವು ಏನು ಕೇಳಬೇಕೋ ಅದನ್ನು ಅರ್ಥಗರ್ಭಿತವಾಗಿ ಸ್ವಲ್ಪದರಲ್ಲಿಯೇ ಕೇಳಿದರೆ ಸರ್ಕಾರ ಅದಕ್ಕೆ ಸರಿಯಾದ ಉತ್ತರ ಕೊಡುತ್ತದೆ ಮತ್ತು ಎಲ್ಲರಿಗೂ ಸಮಾಧಾನಕರವಾದ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ತಮ್ಮ ಸಲಹೆ ಸರಿಯಾಗಿದೆ. ನಾಳೆಯಿಂದ ಆ ಕೆಲಸ ಮಾಡೋಣ. ದಯವಿಟ್ಟು ಇವತ್ತು ಅವಕಾಶ ಕೊಡಿ.

(ಗೊಂದಲ)

ಶ್ರೀ ಎಸ್.ಹೆಚ್. ಕೌಜಲಗಿ:- ಮಾನ್ಯ ಅಧ್ಯಕ್ಷರೇ, ತಾವು ಅವಕಾಶ ಮಾಡಿ ಕೊಡಬೇಕು. ನನ್ನ ಪ್ರಶ್ನೆ ಬಹಳ ಪ್ರಾಮುಖ್ಯವಾಗಿದೆ. ತಾವು ಅವಕಾಶ ಕೊಡಬೇಕು.

(ಗೊಂದಲ)

<u>//ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.</u>

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಮೊದಲನೆಯ ಪಟ್ಟಿಯಲ್ಲಿರುವ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಷಯ:- ಸಾರಿಗೆ ಇಲಾಖೆಯ ನಷ್ಟದ ಮೊತ್ತ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧:- (೧)
ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):-
ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಇಲಾಖೆಯಲ್ಲಿ (ಕೆ.ಎಸ್.ಆರ್.ಟಿ.ಸಿ) ೧೯೮೯-೯೦, ೧೯೯೦-೯೧, ೧೯೯೧-೯೨ನೇ ಡಿಸೆಂಬರ್ ಅಖ್ಯೆರುವರೆಗೆ ಆಗಿರುವ ನಷ್ಟವೆಷ್ಟು? (ವರ್ಷವಾರು ವಿವರ ನೀಡುವುದು)
ಆ) ಆ ರೀತಿ ನಷ್ಟಕ್ಕೆ ಕಾರಣಗಳೇನು?
ಇ) ಅಲ್ಲಿ ಅವ್ಯವಹಾರಗಳೇನಾದರೂ ಬೆಳಕಿಗೆ ಬಂದಿದೆಯೇ?
ಈ) ಬಂದಿದ್ದಲ್ಲಿ, ಅಂತಹ ಯಾವುದೇ ಅವ್ಯವಹಾರದ ಬಗ್ಗೆ ಕ್ರಮ ತೆಗೆದುಕೊಳ್ಳಲಾಗಿದೆಯೇ?
ಉ) ಅಲ್ಲಿನ ಅಪಾರವಾದ ಸೋರಿಕೆಯನ್ನು, ನಷ್ಟವನ್ನು ನಿಲ್ಲಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಭೀಮಣ್ಣ ಖಂಡ್ರೆ
(ಸಾರಿಗೆ ಸಚಿವರು)